ಚುಕ್ಕೆ ರಹಿತ ಪ್ರಶ್ನೆ ದಿನಾಂಕ 28-3-2022 39

## ವಿಧಾನ ಪರಿಷತ್ ಸದಸ್ಯರಾದ ಶ್ರೀ ಪಿ.ಆರ್. ರಮೇಶ್, ಶ್ರೀ ಮರಿತಿಬ್ಬೇಗೌಡ ಹಾಗೂ ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ ರವರು ನಿಯಮ 72ರಡಿ ಮಂಡಿಸಿರುವ ಸೂಚನೆಗೆ ಉತ್ತರ.

ಪ್ರಶ್ನೆ: ಬೆಂಗಳೂರಿನ ದೇವರಚಿಕ್ಕನಹಳ್ಳಿಯ ವಾರ್ಡ್ ನಂ:188ರಲ್ಲಿ ಭಾರತ ಸರ್ಕಾರದ ಅಧೀನದಲ್ಲಿರುವ ಇಂಡಿಯನ್ ಆಯಿಲ್ ಕಾರ್ಪೋರೇಷನ್‌ಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಸಿ.ಎ. ನಿವೇಶನ 12/1, ಹಂಚಿಕೆಯಾಗಿರುತ್ತದೆ. ಸ್ಥಳೀಯ ಭೂಗಳ್ಳರ ಪರವಾಗಿ ಯಾವುದೇ ಆದೇಶ / ದಾಖಲಾತಿ ಇಲ್ಲದಿದ್ದರೂ ಸಹ ಸ್ಥಳೀಯ ಪೊಲೀಸ್ ಅಧಿಕಾರಿಗಳ ರಕ್ಷಣೆ ಪಡೆದು, ಸರ್ಕಾರಿ ಜಮೀನನ್ನು ಕಬಳಿಸುವ ಸಲುವಾಗಿ ಏಕಾಏಕಿ ದಿನಾಂಕ:23-10-2020ರಂದು ಭೂಗಳ್ಳರು ದಾಳಿ ನಡೆಸಿ, ಕಾಂಪೌಂಡ್‌ನ್ನು ಕೆಡವಿ ಸಿ.ಸಿ. ಕೆಮರಾಗಳನ್ನು ಹೊಡೆದುಹಾಕಿ, ಅತಿಕ್ರಮಣ ಪ್ರವೇಶ ಮಾಡಿ ಕಾಮಗಾರಿಗೆ ಅಡ್ಡಿ ಉಂಟು ಪಡಿಸಿರುತ್ತಾರೆ. ಈ ಸಂಬಂಧ ಸ್ಥಳೀಯ ಪೊಲೀಸ್ ಅಧಿಕಾರಿಗಳಿಗೆ ದೂರು ನೀಡಿದ್ದರೂ, ಕೇವಲ ಒಬ್ಬರ ಮೇಲೆ ಮಾತ್ರ ದೂರನ್ನು ದಾಖಲಿಸುವ ಮೂಲಕ ದೂರನ್ನು ದುರ್ಬಲಗೊಳಿಸುತ್ತಿದ್ದಾರೆ. ಅತಿಕ್ರಮಿತ ಪ್ರದೇಶದಲ್ಲಿ ಭೂಗಳ್ಳರು ಪಟ್ಟಿಗೆ ಅಂಗಡಿಗಳನ್ನು ಅನಧಿಕೃತಾಗಿ ನಿರ್ಮಿಸಿರುವುದಿಲ್ಲದೆ, ಕಳೆದ 6 ತಿಂಗಳ ಹಿಂದೆ ಸದರಿ ಬಂಕಿನಲ್ಲಿ ಡೀಸಲ್ ತುಂಬಿಸಿದ್ದರೂ ಅದನ್ನು ಮಾರಾಟ ಮಾಡಲು ಅವಕಾಶ ನೀಡುತ್ತಿಲ್ಲ. ಸದರಿ ಪ್ರಕರಣಕ್ಕೆ ಯಾವುದೇ ಸಂಬಂಧವಿಲ್ಲದೆ ಇದ್ದರೂ ಸ್ಥಳೀಯ ಉನ್ನತ ಮಟ್ಟದ ಪೊಲೀಸ್ ಅಧಿಕಾರಿಗಳು ಉದ್ದೇಶಪೂರ್ವಕವಾಗಿ ನ್ಯಾಯಾಲಯದ ನೆಪವೊಡ್ಡಿ ಭೂಗಳ್ಳರ ಪರವಾಗಿ ಕಾರ್ಯನಿರ್ವಹಿಸುತ್ತಿದ್ದು, ಇದರಿಂದಾಗಿ ಸರ್ಕಾರಿ ಸ್ವಾಮ್ಯದ ಸಂಸ್ಥೆಗೆ ನಷ್ಟ ಉಂಟಾಗಿದ್ದು, ಸಾರ್ವಜನಿಕ ಹಿತಾಸಕ್ತಿಯ ಹಿನ್ನೆಲೆಯಲ್ಲಿ ಉಂಟಾಗಿರುವ ಗಂಭೀರ ಸಮಸ್ಯೆ ಕುರಿತು.

## ಸರ್ಕಾರದ ಹೇಳಿಕೆ

ಉತ್ತರ: ದಿನಾಂಕ:03-11-1990 ರಂದು ಹೌಸಿಂಗ್ & ಅರ್ಬನ್ ಡೆವಲಪ್‌ಮೆಂಟ್ ಸೆಕ್ರೇಟರಿಯೇಟ್ ರವರು ದೇವರಚಿಕ್ಕನಹಳ್ಳಿ ಗ್ರಾಮದ ಸರ್ವೆ ನಂ. – 44ರಲ್ಲಿನ ಕೃಷ್ಣಪ್ಪನವರ 0-37 ಗುಂಟೆ ಜಮೀನು ಹಾಗೂ ಇವರ ಜೊತೆಯಲ್ಲಿ ಸರ್ವೆ ನಂ-44 ರಲ್ಲಿನ ಒಟ್ಟು 3-27 ಗುಂಟೆ ಜಮೀನನ್ನು ಅಂತಿಮ ಅಧಿಸೂಚನೆ ಸಂಖ್ಯೆ:ನಂ:ಹೆಚ್.ಯುಡಿ-334/ಎಂ.ಎನ್.ಎಕ್ಸ್ 90 ರೀತ್ಯ ಬಿಟಿಎಂ ಲೇಔಟ್ 4ನೇ ಹಂತವನ್ನು ರಚಿಸುವ ಉದ್ದೇಶದಿಂದ ಭೂ ಸ್ವಾಧೀನಪಡಿಸಿಕೊಂಡಿರುತ್ತದೆ. ಮುಂದುವರೆದು ಬಿಡಿಎ ರವರು ಸ್ವಾಧೀನ ಮಾಡಿಕೊಂಡಿದ್ದ ದೇವರಚಿಕ್ಕನಹಳ್ಳಿ ಗ್ರಾಮದ ಸ.ನಂ. 44 ರಲ್ಲಿ 0-37 ಗುಂಟೆ ಜಮೀನಿನ ಸ್ವಾಧೀನತೆಯನ್ನು ಪ್ರಶ್ನಿಸಿ ದಿವಂಗತ ಕೃಷ್ಣಪ್ಪನವರ ಪತ್ನಿ ಶ್ರೀಮತಿ ರುಕ್ಕಮ್ಮ ಮತ್ತು ಅವರ ಕುಟುಂಬದ ಸದಸ್ಯರು ಘನ ಉಚ್ಚ ನ್ಯಾಯಾಲಯ ಕರ್ನಾಟಕ ರಾಜ್ಯ ಇಲ್ಲಿ ರಿಟ್ ಅರ್ಜಿ ಸಂಖ್ಯೆ:35143-35147/2019ರಲ್ಲಿ ದಾವೆಯನ್ನು ಸಲ್ಲಿಸಿದ್ದು, ವಿಚಾರಣೆ ನಡೆಸಿದ ಘನ ಉಚ್ಚ ನ್ಯಾಯಾಲಯವು ದಿನಾಂಕ:18-09-2019 ರಂದು Acquisition of land in question in so far as 0-37 Guntas of land in sy No-44 of Devarachikkanahalli village Begur hobli Bangalore south taluk is declared as having been abandoned and consequently lapsed ಎಂದು ಆದೇಶ ನೀಡಿರುತ್ತದೆ. ಬಿಡಿಎ ರವರು ನಾಗರೀಕ ಸೌಲಭ್ಯ ನಿವೇಶನ [ಸಿಎ] ಸಂಖ್ಯೆ-12/1 ಅನ್ನು ಮೆ॥ ಇಂಡಿಯನ್ ಆಯಿಲ್ ಕಾರ್ಪೋರೇಷನ್ ಲಿಮಿಟೆಡ್ ಸಂಸ್ಥೆಗೆ ದಿನಾಂಕ:04-11-2019 ರಂದು ಗುತ್ತಿಗೆ ಕರಾರು ಪತ್ರವನ್ನು ನೀಡಿ ದಿನಾಂಕ:07-11-2019 ರಂದು ಸ್ವಾಧೀನ ಪತ್ರವನ್ನು ನೀಡಿರುತ್ತದೆ.

ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:35143-35147/2019 [ಎಲ್‌ಎ/ಬಿಡಿಎ] ರಲ್ಲಿ ಶ್ರೀಮತಿ. ರುಕ್ಕಮ್ಮ ರವರು ಬಿಡಿಎ ರವರ ವಿರುದ್ಧ ರಿಟ್ ಅರ್ಜಿ ಸಲ್ಲಿಸಿದ್ದು, ಇದನ್ನು ಪ್ರಶ್ನಿಸಿ ಬಿಡಿಎ ರವರು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ರಿಟ್ ಅಪೀಲು ಅರ್ಜಿ ಸಂಖ್ಯೆ:601/2020 [ಎಲ್.ಎ-ಬಿಡಿಎ] ರಲ್ಲಿ ದಾವೆಯನ್ನು ಹೂಡಿದ್ದು, ಸದರಿ ದಾವೆಯ ವಿಚಾರವನ್ನು ಪರಿಶೀಲಿಸಿದ ಘನ ಉಚ್ಚ ನ್ಯಾಯಾಲಯವು ಶ್ರೀಮತಿ ರುಕ್ಕಮ್ಮ ರವರ ಪರವಾಗಿ ಆದೇಶ ನೀಡಿ ದಿನಾಂಕ:19-01-2021 ರಂದು ರಿಟ್ ಅಪೀಲು ಅನ್ನು ವಜಾಗೊಳಿಸಿರುತ್ತದೆ.

ದಿನಾಂಕ:21-02-2020 ರಂದು ಶ್ರೀ ಸತೀಶ್ ಅಭಿಯಂತರರು, ಬಿಡಿಎ ರವರು ಜಯರಾಮ್ ಮತ್ತು ಸುನಿಲ್‌ಕುಮಾರ್ ಇವರುಗಳು ಬಿಡಿಎ ಸ್ವಾಧೀನಪಡಿಸಿಕೊಂಡು ಮೆ॥ ಇಂಡಿಯನ್ ಆಯಿಲ್ ಕಾರ್ಪೋರೇಷನ್ ಲಿಮಿಟೆಡ್ ರವರಿಗೆ ಹಂಚಿಕೆ ಮಾಡಿದ್ದ ಸಿಎ ಸೈಟ್ ನಂ-12/1ಕ್ಕೆ ಅತಿಕ್ರಮ ಪ್ರವೇಶ ಮಾಡಿ ತಮಗೆ ಸೇರಿದ್ದೆಂದು ಬೋರ್ಡ್ ಅನ್ನು ನೆಟ್ಟಿದ್ದ ಬಗ್ಗೆ ದೂರು ನೀಡಿದ್ದು ಈ ಬಗ್ಗೆ ಹುಳಿಮಾವು ಪೊಲೀಸ್ ಠಾಣೆ ಮೊ.ಸಂ. 39/2020 ಕಲಂ 447, 427 ಐಪಿಸಿ ರೀತ್ಯಾ ಪ್ರಕರಣ ದಾಖಲಿಸಿ ತನಿಖೆಯನ್ನುಕೈಗೊಂಡು ಆರೋಪಿತರ ವಿರುದ್ಧ ಘನ 5ನೇ ಎಸಿಎಂಎಂ ನ್ಯಾಯಾಲಯದಲ್ಲಿ ದೋಷಾರೋಪಣಾ ಪಟ್ಟಿಯನ್ನು ನಿವೇಧಿಸಿಕೊಂಡಿದ್ದು, ಹಾಲಿ ಈ ಪ್ರಕರಣವು ಘನ ನ್ಯಾಯಾಲಯದಲ್ಲಿ ಸಿಸಿ ನಂ:13712/2020ರಲ್ಲಿ ವಿಚಾರಣಾ ಹಂತದಲ್ಲಿರುತ್ತದೆ.

ದಿನಾಂಕ:31-10-2020 ರಂದು 20.35 ಗಂಟೆಗೆ ಶ್ರೀ ಪ್ರಶಾಂತ್ ಬಿನ್ ಪ್ರತಾಪ್ 33 ವರ್ಷ ಅಸಿಸ್ಟಂಟ್ ಮಾನೇಜರ್ ಮೆ॥ಇಂಡಿಯನ್ ಆಯಿಲ್ ಕಾರ್ಪೋರೇಷನ್ ಪ್ರೈವೇಟ್ ಲಿಮಿಟೆಡ್ ನಂ-29, ಪಿ ಕಾಳಿಂಗರಾವ್ ರೋಡ್, ಅಂಜುಮಾನ್ ಕೆ.ಆರ್. ಟವರ್ಸ್ ಮಿಷನ್ ರೋಡ್ ರಿಚ್ಮಂಡ್ ಸರ್ಕಲ್ ಬೆಂಗಳೂರು ಇವರು ಹುಳಿಮಾವು ಪೊಲೀಸ್ ಠಾಣೆಯಲ್ಲಿ ಹಾಜರಾಗಿ ನೀಡಿದ ದೂರಿನ ಸಾರಾಂಶವೇನೆಂದರೆ ಬಿಡಿಎ ರವರು ಅವರಿಗೆ ಹಂಚಿಕೆ ಮಾಡಿದ್ದ ಸಿ.ಎ. ಸೈಟ್ ನಂ-12/1 ರಲ್ಲಿನ ಜಾಗದಲ್ಲಿ ಕೆಲಸ ನಿರ್ವಹಿಸುತ್ತಿದ್ದ ಕಂಟ್ರಾಕ್ಟರ್ ಮೆ॥ ಮಹಾ ಕನ್‌ಸ್ಟ್ರಕ್ಷನ್ ರವರು ಐಓಸಿಎಲ್ ತಿಳಿಸಿದ್ದೇನೆಂದರೆ, ದಿನಾಂಕ:30-10-2020 ರಂದು ಸುಮಾರು 12.00 ಗಂಟೆ ಸಮಯದಲ್ಲಿ ಕೆಲವು ಅಪರಿಚಿತರು ದೊಡ್ಡ ಯಂತ್ರಗಳೊಂದಿಗೆ ಸ್ವತ್ತಿನಲ್ಲಿ ನಿರ್ಮಿಸಿದ್ದ ಶೀಟಿನ ಪೆನ್ಸಿಂಗ್ ಅನ್ನು ಕೆಡವಿ ಹಾಕಿ ಸುಮಾರು 20 ಲಕ್ಷ ರೂನಷ್ಟು ನಷ್ಟಪಡಿಸಿರುತ್ತಾರೆ. ಈ ವಿಷಯದ ಬಗ್ಗೆ ಆರೋಪಿತರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ಕೋರಿ ನೀಡಿದ ದೂರನ್ನು ಪಡೆದು ಹುಳಿಮಾವು ಪೊಲೀಸ್ ಠಾಣೆಯ ಮೊ.ಸಂ.203/2020. ಕಲಂ 427, 447 ರೆ/ವಿ 34 ಐ.ಪಿ.ಸಿ ರೀತ್ಯಾ ಪ್ರಕರಣವನ್ನು ದಾಖಲಿಸಿಕೊಂಡು ತನಿಖೆಯನ್ನು ಕೈಗೊಂಡಿರುತ್ತದೆ.

ಈ ಪ್ರಕರಣದ ತನಿಖಾ ಕಾಲದಲ್ಲಿ ಆರೋಪಿತ ಮೂಲ ಜಮೀನಿನ ಮಂಜೂರಾತಿ ಪಡೆದ ಕೃಷ್ಣಪ್ಪನ ಮೊಮ್ಮಗನಾದ ಸುನೀಲ್‌ಕುಮಾರ್ ರವರು ಅವರ ಕಾರ್ಮಿಕರೊಡನೆ ಮೆ॥ ಇಂಡಿಯನ್ ಆಯಿಲ್ ಕಾರ್ಪೋರೇಷನ್ ಲಿಮಿಟೆಡ್ ಸಂಸ್ಥೆಯವರು ಉಸ್ತುವಾರಿಯಲ್ಲಿದ್ದ ಸ್ವತ್ತಿಗೆ ಅತಿಕ್ರಮ ಪ್ರವೇಶ ಮಾಡಿ ಶೀಟ್‌ಗಳನ್ನು ಕಿತ್ತುಹಾಕಿ ಹಾನಿಪಡಿಸಿರುವುದು ಪ್ರತ್ಯಕ್ಷ ಸಾಕ್ಷಿದಾರರಾದ ಮಹಾ ಕನ್‌ಸ್ಟ್ರಕ್ಷನ್ ಮಾಲೀಕರಾದ ಮಹಾ ರುದ್ರಮೂರ್ತಿ ರವರ ಹೇಳಿಕೆ ಮತ್ತು ತನಿಖೆಯಿಂದ ಕಂಡು ಬಂದ ಮೇರೆಗೆ ಆರೋಪಿ ಸುನೀಲ್‌ಕುಮಾರ್ ಬಿನ್ ಕೃಷ್ಣಪ್ಪ, 34 ವರ್ಷ ವಾಸ:197, ದೊಡ್ಡಮನೆ ಕೃಷ್ಣಪ್ಪ ಲೇಔಟ್, ಅರಕೆರೆ, ಬಿ.ಜಿ. ರಸ್ತೆ, ಬೆಂಗಳೂರು ಈತನನ್ನು ದಿನಾಂಕ:03-12-2020 ರಂದು ದಸ್ತಗಿರಿಪಡಿಸಿ ತನಿಖೆಯನ್ನು ಕೈಗೊಂಡು ಸಾಕ್ಷಾದಾರಗಳನ್ನು ಸಂಗ್ರಹಿಸಿ ಆತನ ವಿರುದ್ಧ ದಿನಾಂಕ:26-07-2021 ರಂದು ಘನ 5ನೇ ಎಸಿಎಂಎಂ ನ್ಯಾಯಾಲಯದಲ್ಲಿ ದೋಷಾರೋಪಣಾ ಪಟ್ಟಿಯನ್ನು ನಿವೇದಿಸಿಕೊಂಡಿದ್ದು, ಹಾಲಿ ಈ ಪ್ರಕರಣವು ಘನ ನ್ಯಾಯಾಲಯದಲ್ಲಿ ಸಿಸಿ ನಂ:17053/2021 ರಲ್ಲಿ ವಿಚಾರಣಾ ಹಂತದಲ್ಲಿರುತ್ತದೆ.

ಸದರಿ ಜಾಗದಲ್ಲಿ ಸ್ಥಳೀಯ ಪೊಲೀಸ್ ಅಧಿಕಾರಿಗಳು ಪರಿಶೀಲಿಸಿದಾಗ ಪ್ರಸ್ತುತ ಡಿಸೇಲ್ ಹಾಕುವ ಯಾವುದೇ ಚಟುವಟಿಕೆಗಳು ಕಮಡುಬರುತ್ತಿರುವುದಿಲ್ಲ. ಈ ಸ್ವತ್ತಿನ ವಿಚಾರವಾಗಿ ಈಗಾಗಲೇ ಐಓಸಿಎಲ್ ರವರಿಗೆ ಸೈಟ್ ಅನ್ನು ಮಂಜೂರು ಮಾಡಿದ್ದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಘನ ಸರ್ವೋಚ್ಚ ನ್ಯಾಯಾಲಯದಲ್ಲಿ ಎಸ್.ಎಲ್.ಪಿ (ಪಿಟಿಷನ್ ಪಾರ್ ಸ್ಪೆಷಲ್ ಲೀವ್) ನಂ: 6496/2021 ಧಾವೆಯಲ್ಲಿ ಸಲ್ಲಿಸಿದ್ದು, ಆ ಮೇರೆಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ:01-07-2021 ರಂದು "Status quo as of today shall be maintained by the parties with regard to the suit property"ಎಂದು ಆದೇಶ ನೀಡಿ ಮುಂದಿನ ವಿಚಾರಣೆ ದಿನಾಂಕ:08-03-2022 ನಿಗಧಿಪಡಿಸಿರುತ್ತಾರೆ.

(ಆರಗ ಜ್ಞಾನೇಂದ್ರ)
ಗೃಹ ಸಚಿವರು

**ಸಂಖ್ಯೆ: ಒಇ 68 ಎಸ್‌ಎಸ್‌ಟಿ 2022**